<u>ಕರ್ನಾಟಕ ಲೋಕಾಯುಕ್ತ</u>

ನಂ. ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/1607/2021
ಪಿ.ಓ. ಎಆರ್‌ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 09/11/2021.

**<u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>**

**ವಿಷಯ:** ಶ್ರೀ. ಆರ್. ಜಮದಗ್ನಿ ಬಿನ್ ಆರ್.ಕನಕಪ್ಪ, ಜವಾನ, ಸಹಾಯಕ ನಿರ್ದೇಶಕರ ಗ್ರೇಡ್-1 ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ, ಕೊಪ್ಪಳ ಜಿಲ್ಲೆರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

*****

1. ಕೊಪ್ಪಳ ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಭಂದಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಆರ್. ಜಮದಗ್ನಿ ಬಿನ್ ಆರ್. ಕನಕಪ್ಪ, ಜವಾನ, ಸಹಾಯಕ ನಿರ್ದೇಶಕರ ಗ್ರೇಡ್-1 ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ,** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ), ದೂರುದಾರರಾದ **ಶ್ರೀ. ಮಂಜುನಾಥ ಬಿನ್ ಲಕ್ಷ್ಮಣ ಬೋವಿ, ಕಂಪ್ಯೂಟರ್ ಆಪರೇಟರ್, ಸಾಯಿರಾಮ್ ವೇ ಬ್ರಿಡ್ಜ್, ಗಂಜ್ ಸರ್ಕಲ್, ಟಣಕನಕಲ್ ವಾಸಿ, ಕೊಪ್ಪಳ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **<u>ಪ್ರಕರಣದ ಸಂಕ್ಷಿಪ್ತ ಸಾರಾಂಶ:-</u>**

i) ದೂರುದಾರರಾದ ಶ್ರೀ ಮಂಜುನಾಥ ಬಿನ್ ಲಕ್ಷ್ಮಣ ಬೋವಿ, ಟಣಕನಕಲ್ ವಾಸ, ಕೊಪ್ಪಳ ದಿನಾಂಕ: 14-01-2019 ರಂದು ಕೊಡ್ಲಾ ವಾಸಿ, ಸಿದ್ದಮ್ಮ ಬಿನ್ ದೇವೇಂದ್ರಪ್ಪ, ಕಲಬುರಗಿ ಇವರೊಂದಿಗೆ ಕೊಪ್ಪಳದ ಹಿರಿಯ ಉಪನೋಂದಾಣಾಧಿಕಾರಿಗಳ ಕಛೇರಿಯಲ್ಲಿ ಅಂತರ್‌ಜಾತಿ ಮದುವೆಯಾಗಿರುತ್ತದೆ. ದೂರುದಾರರು ಅನುಸೂಚಿತ ಜಾತಿ ಎಸ್‌ಸಿ ಪಂಗಡಕ್ಕೆ ಸೇರಿದ್ದು, ದೂರುದಾರರ ಪತ್ನಿ ವೀರಶೈವ ಲಿಂಗಾಯಿತ ಜಾತಿಗೆ ಸೇರಿದ್ದರಿಂದ, ಸರ್ಕಾರ ನೀಡುವ

ಅಂತರ್‌ಜಾತಿ ವಿವಾಹ ಪ್ರೋತ್ಸಾಹಧನ ಪಡೆಯಲು ದಿ: 22/01/2019 ರಂದು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ನಂತರ ದಿ: 23/01/2019 ರಂದು ಸಹಾಯಕ ನಿರ್ದೇಶಕರು, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಕಛೇರಿಗೆ ಹೋಗಿ ಸದರಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ, ಮಹೇಶರವರನ್ನು ಅರ್ಜಿಯ ಬಗ್ಗೆ ವಿಚಾರಿಸಿದಾಗ, ಅವರು ಎದುರುದಾರರ ಹೆಸರನ್ನು ತಿಳಿಸಿ, ಅವರಿಗೆ ಅರ್ಜಿ ಸಲ್ಲಿಸಲು ತಿಳಿಸಿದ್ದು, ಅದರಂತೆ ದೂರುದಾರರು ಆನ್‌ಲೈನ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ಪ್ರತಿಯನ್ನು ಎದುರುದಾರರಿಗೆ ನೀಡಿ, ಸ್ವೀಕೃತಿಯನ್ನು ಪಡೆದುಕೊಂಡಿರುತ್ತಾರೆ. ಆಗ ಎದುರುದಾರರು ಪ್ರತಿ ಕಂತಿಗೆ 62,500/- ರೂ.ಗಳಂತೆ ಒಟ್ಟು 04 ಕಂತುಗಳಲ್ಲಿ ಪ್ರೋತ್ಸಾಹಧನ ಬರುತ್ತದೆಂದು ತಿಳಿಸಿದ್ದು, ದೂರುದಾರರು ದಿ: 04/04/2019ರಂದು ಎದುರುದಾರರನ್ನು ಭೇಟಿಯಾಗಿ ಅವರಿಗೆ ಬರಬೇಕಾಗಿದ್ದ ಪ್ರೋತ್ಸಾಹಧನ ಹಣದ ಬಗ್ಗೆ ವಿಚಾರಿಸಿದಾಗ, ಎದುರುದಾರರು 12,500/- ಮತ್ತು 50,000/- ಎರಡು ಚೆಕ್ಕುಗಳನ್ನು ಮೊದಲನೆಯ ಕಂತು ಎಂದು ನೀಡಿರುತ್ತಾರೆ. ನಂತರ ದೂರುದಾರರ ಖಾತೆಗೆ ಹಣ ಜಮಾ ಆದ ಮೇಲೆ 20,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಆಗ ದೂರುದಾರರು ಅಲ್ಲಿಯೇ ಇದ್ದ ಮಹೇಶನಿಗೆ ಹಣ ಕೇಳುತ್ತಿರುವ ಬಗ್ಗೆ ತಿಳಿಸಿ, ದೂರುದಾರರು ಬಡವರಿದ್ದೇವೆ ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ, ಎದುರುದಾರರು ಆಯ್ತು ಸಾಹೇಬರಿಗೆ ಹೇಳಿ 10,000/- ರೂ.ಗಳಿಗೆ ಮಾಡಿಸುತ್ತೇನೆಂದು ತಿಳಿಸಿರುತ್ತಾರೆ. ಅದೇ ಸಮಯದಲ್ಲಿ ಮಹೇಶನು ದೂರುದಾರರ ಮತ್ತು ಅವರ ಹೆಂಡತಿಯ ಹೆಸರಿನಲ್ಲಿ ಅಂಚೆ ಕಛೇರಿಯಲ್ಲಿ ಜಂಟಿ ಖಾತೆಯ ಪಾಸ್‌ಬುಕ್ ಮಾಡಿಸಿಕೊಂಡು ಬರಲು ತಿಳಿಸಿರುತ್ತಾರೆ. ದಿ: 15/04/2019 ರಂದು ಮಧ್ಯಾಹ್ನ 2.20 ಕ್ಕೆ ದೂರುದಾರರು ಅಂಚೆ ಕಛೇರಿಯ ಜಂಟಿ ಪಾಸ್‌ಪುಸ್ತಕ ತೆಗೆದುಕೊಂಡು ಎದುರುದಾರರನ್ನು ಅವರ ಕಛೇರಿಯಲ್ಲಿ ಭೇಟಿಯಾಗಿ ಪ್ರೋತ್ಸಾಹಧನ ಕಂತಿನ ಬಗ್ಗೆ ಮಾತನಾಡುತ್ತಾ, ದೂರುದಾರರು ಅವರ ಮೊಬೈಲ್‌ನ್ನು ಆನ್ ಮಾಡಿಕೊಂಡಿದ್ದು, ಆಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಅದನ್ನು ದೂರುದಾರರು ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಎದುರುದಾರರು 2ನೇ ಕಂತಿನ 12,500/- ಮತ್ತು 50,000/- ಎರಡು ಚೆಕ್ಕುಗಳನ್ನು ನೀಡಿ, ಅಂಚೆ ಕಛೇರಿಯ ಜಂಟಿ ಖಾತೆಯಲ್ಲಿ ಜಮಾ ಮಾಡಬೇಕು ಮತ್ತು 5 ವರ್ಷಗಳ ಕಾಲ ಫೀಕ್ಸಡ್ ಡಿಪಾಜಿಟ್ ಇರುತ್ತದೆ ಅಂತ ತಿಳಿಸಿ ಡಿಪಾಜಿಟ್ ಮಾಡಿದ, ರಶೀದಿಯ ಕೌಂಟರ್ ಪ್ರತಿಯನ್ನು ತಂದುಕೊಡಬೇಕು ಎಂದು ತಿಳಿಸಿ 15,000/- ರೂ ಲಂಚದ ಹಣ ಕೊಡಬೇಕು ಎಂದು ಒತ್ತಾಯ ಮಾಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿರುವುದರಿಂದ, ದಿ: 16/04/2019 ರಂದು ಕೊಪ್ಪಳ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ನಿರೀಕ್ಷಕರಿಗೆ

ದೂರುದಾರರು ಲಿಖಿತ ದೂರನ್ನು ಸಲ್ಲಿಸಿರುತ್ತಾರೆ, ಆ ಬಗ್ಗೆ ಕೊಪ್ಪಳ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ಠಾಣೆಯ ಗುನ್ನೆ ನಂ:04/2019ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದುಪಡಿ ಕಾಯ್ದೆ-2018) ರಡಿಯಲ್ಲಿ ಎದುರುದಾರರ ವಿರುದ್ಧ ಪ್ರ.ವ.ವ. ವರದಿ ದಾಖಲು ಮಾಡಿರುತ್ತಾರೆ.

ii) ದಿ: 16/04/2019 ರಂದು ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಸಿ, ದೂರುದಾರರನ್ನು ಪರಿಚಯಿಸಿ, ಜಪ್ತಿಪೂರ್ವದ ಪಂಚನಾಮೆಯ ಸಮಯದಲ್ಲಿ ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ ದೂರುದಾರರು ಎದುರುದಾರರ ಜೊತೆ ಮಾತನಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡಿದ್ದ, ಮೊಬೈಲ್‌ನ್ನು ತನಿಖಾಧಿಕಾರಿಗೆ ನೀಡಿದ್ದು, ತನಿಖಾಧಿಕಾರಿಯವರು ಸದರಿ ಸಂಭಾಷಣೆಯನ್ನು ಕಂಪ್ಯೂಟರ್‌ಗೆ ಹಾಕಿ ಎಲ್ಲರಿಗೂ ಕೇಳಿಸಿ ನಂತರ ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿದ ನಂತರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಆ ಸಿ.ಡಿ.ಯನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ದೂರುದಾರರು ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 15,000/- ರೂ. (2000/- ರೂ. ಮುಖಬೆಲೆಯ 07 ನೋಟುಗಳು ಮತ್ತು 500 ರೂ ಮುಖಬೆಲೆಯ 02 ನೋಟುಗಳು) ಹಾಜರುಪಡಿಸಿದ್ದು, ಸದರಿ ನೋಟುಗಳ ವಿವರಗಳನ್ನು ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿಕೊಂಡ ನಂತರ ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-2 ರವರು ದೂರುದಾರರು ಧರಿಸಿದ ಪ್ಯಾಂಟಿನ ಬಲಜೇಬಿನಲ್ಲಿ ಇಡಿಸಿದರು.

iii) ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿ ಹೋಗಿ ನಿಮ್ಮ ಕೆಲಸದ ಬಗ್ಗೆ ಕೇಳಿದಾಗ ಎದುರುದಾರರು ಲಂಚದ ಹಣ ಕೇಳಿದರೆ ದೂರುದಾರರು ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ನೀಡಿ, ಅವರು ಸ್ವೀಕರಿಸಿದ ನಂತರ, ದೂರುದಾರರು ಅಲ್ಲಿಂದ ಹೊರಬಂದು ಕೈಗಳಿಂದ ತಲೆಯ ಕೂದಲನ್ನು ಎರಡು ಮೂರು ಭಾರಿ ಮೇಲಕ್ಕೆ ಏರಿಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಈ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳು ಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iv) ದಿನಾಂಕ 16/04/2019 ರಂದು ದೂರುದಾರರು, ನೆರಳು ಮತ್ತು ಪಂಚಸಾಕ್ಷಿಗಳು ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಕೊಪ್ಪಳದ ಶಾಂತವೀರ ನಗರದಲ್ಲಿರುವ ಕೊಣ್ಣೂರು ಆಸ್ಪತ್ರೆಯ ಹತ್ತಿರದ ಎದುರುದಾರರ ಕಛೇರಿಯ ಬಳಿ ಬಂದಿರುತ್ತಾರೆ. ದೂರುದಾರರಿಗೆ ಮತ್ತು ನೆರಳು ಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ, ಎದುರುದಾರರ ಬಳಿ ಕಳುಹಿಸಿದ್ದು, ದೂರುದಾರರು ನೆರಳು ಸಾಕ್ಷಿಯೊಂದಿಗೆ ಎದುರುದಾರರ ಕೊಠಡಿಗೆ ಹೋಗಿ, ದೂರುದಾರರು ಅವರ ಕೆಲಸದ ಬಗ್ಗೆ ಕೇಳಿದಾಗ, ಎದುರುದಾರರು ಲಂಚದ ಹಣವನ್ನು ಕೇಳಿದ್ದು, ದೂರುದಾರರು ಹಣ ಕೊಡಲು ಹೋದಾಗ ಎದುರುದಾರರು ಒಂದು ಕವರ್‌ನ್ನು ಕೊಟ್ಟು ಅದರಲ್ಲಿ ಹಾಕಿ ಕೊಡುವಂತೆ ತಿಳಿಸಿದ್ದು, ಅದರಂತೆ ಪುಡಿ ಲೇಪಿತ 15000/- ರೂಗಳನ್ನು ಕವರ್‌ನಲ್ಲಿ ಹಾಕಿ ಎದುರುದಾರರಿಗೆ ನೀಡಿದಾಗ, ಅವರು ಅದನ್ನು ಸ್ವೀಕರಿಸಿ, ಮತ್ತೆ ಆ ಹಣವನ್ನು ಕವರ್‌ನಿಂದ ಹೊರತೆಗೆದು ಎಣಿಸಿಕೊಂಡು ಕವರ್‌ನಲ್ಲಿ ಹಾಕಿ, ಅವರ ಟೇಬಲಿನ ಬಲಗಡೆಯ ಡ್ರಾನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಸುಮಾರು ಮಧ್ಯಾಹ್ನ 1.00 ಗಂಟೆಗೆ ನೆರಳುಸಾಕ್ಷಿಯೊಂದಿಗೆ ಕಛೇರಿಯಿಂದ ಹೊರ ಬಂದು ಕೈಗಳಿಂದ ತಲೆಯ ಕೂದಲನ್ನು ಎರಡು ಮೂರು ಭಾರಿ ಮೇಲಕ್ಕೇರಿಸಿಕೊಳ್ಳುವ ಮೂಲಕ ಸನ್ನೆ ಮಾಡಿದ್ದು, ಆಗ ತನಿಖಾಧಿಕಾರಿಯವರು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ದೂರುದಾರರು ಇದ್ದ ಸ್ಥಳಕ್ಕೆ ಧಾವಿಸಿದಾಗ ದೂರುದಾರರು ಎದುರುದಾರರನ್ನು ತೋರಿಸಿ ಇವರೇ ಲಂಚದ ಹಣವನ್ನು ಪಡೆದುಕೊಂಡಿರುತ್ತಾರೆಂದು ತಿಳಿಸಿದ ಮೇರೆಗೆ ತನಿಖಾಧಿಕಾರಿಯವರು ಎದುರುದಾರರಿಗೆ ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿ, ಆ ದ್ರಾವಣವನ್ನು ಎರಡು ಗಾಜಿನ ಬಟ್ಟಲುಗಳಲ್ಲಿ ತೆಗೆದುಕೊಂಡು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಆ ದ್ರಾವಣಗಳನ್ನು ಎರಡು ಬಾಟಲಿಗಳಲ್ಲಿ ಹಾಕಿ ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ.

v) ತನಿಖಾಧಿಕಾರಿಯು ಎದುರುದಾರರಿಗೆ ದೂರುದಾರರಿಂದ ಪಡೆದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ಅವರ ಟೇಬಲ್‌ನ ಡ್ರಾ ದಿಂದ ಬ್ರೌನ್ ಕವರನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯು ಪಂಚ-02 ರವರ ಮುಖಾಂತರ ಆ ನೋಟುಗಳನ್ನು ತೆಗೆಸಿ ಪಂಚ-1 ರವರಿಗೆ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ

ವಿವರಗಳಿಗೆ ಹೋಲಿಕೆಯಾಗುತ್ತದೆಯೇ ಎಂದು ಪರಿಶೀಲಿಸಿ ನೋಡಲು ತಿಳಿಸಿದ್ದು, ವಿವರಗಳನ್ನು ನೋಡಿದಾಗ ಆ ನೋಟುಗಳು ತಾಳೆಯಾದ್ದರಿಂದ ತನಿಖಾಧಿಕಾರಿಯವರು ಆ ಹಣವನ್ನು ವಶಕ್ಕೆ ಪಡೆದಿರುತ್ತಾರೆ.

vi) ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದ ಮೇರೆಗೆ ಎದುರುದಾರರು ಅವರ ಸಮಜಾಯಿಷಿಯಲ್ಲಿ "ಜವಾನನಾಗಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅಧಿಕಾರಿಗಳು ಮೌಖಿಕವಾಗಿ ಹೇಳಿದ ಕೆಲಸವನ್ನು ಮಾಡುತ್ತಿರುತ್ತೇನೆ, ದೂರುದಾರರಿಂದ ಯಾವುದೇ ಬೇಡಿಕೆ ಇಟ್ಟಿರುವುದಿಲ್ಲ. ನಮ್ಮ ಕಚೇರಿಯ ಸಿಬ್ಬಂದಿ ಮಹೇಶ ಎಂಬಾತನ ಊರಿನವರು ಎಂದು ಹೇಳಿದ ಕಾರಣ, ಆನ್ ಲೈನ್ ಅರ್ಜಿಯ ಮಂಜೂರಾದ ಬಿಲ್ಲನ್ನು ಟಿ.ಪಿ.ಯಲ್ಲಿ ಮೇಲ್ ರುಜು ಮಾಡಿಸಿ, ಖಜಾನೆಗೆ ಸಲ್ಲಿಸಿ, ಚೆಕ್ಕನ್ನು ತರಿಸಿ, ದೂರುದಾರರಿಗೆ ಚೆಕ್ ವಿತರಿಸಿದೆನು. ದೂರುದಾರರು ದುಡ್ಡು ತೆಗೆದುಕೊಂಡು ಕಚೇರಿಗೆ ಕೊಡಲು ಬಂದಿರುತ್ತಾರೆ. ಭಯ ಪಟ್ಟು ವಿಷಯ ಏನಾದರೂ ಇರಬಹುದೆಂದು ತಿಳಿಯದೆ ಕವರನ್ನು ಕೊಟ್ಟಿರುತ್ತೇನೆ" ಎಂದು ಬರೆದುಕೊಟ್ಟಿರುತ್ತಾರೆ. ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿಯು ಅಲ್ಲಗಳೆದಿರುತ್ತಾರೆ. ಸದರಿ ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಯು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಕಂಡು ಬರುತ್ತದೆ. ನಂತರ ಎಲ್ಲರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ತಜ್ಞರ ವರದಿಯನ್ನು ಹಾಗೂ ಅಭಿಯೋಜನ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಪಡೆಯಲಾಗಿದ್ದು, ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ದಿ: 16/04/2019 ರಂದು ಎದುರುದಾರರು ಅವರ ಕಚೇರಿಯ ಎಲ್ಲಾ ಸಿಬ್ಬಂದಿಯನ್ನು ಚುನಾವಣಾ ಕರ್ತವ್ಯದ ನಿಮಿತ್ತ ತರಬೇತಿಗೆ ಹೋದ ಸಂದರ್ಭದಲ್ಲಿ ಎದುರುದಾರರು ಮತ್ತು ಮಹೇಶ್ ಮಾತ್ರ ಕೆಲಸ ಮಾಡುತ್ತಿದ್ದು, ದೂರುದಾರರು ಎದುರುದಾರರ ಅಧಿಕಾರಿಗಳಿಗೆ ಕೊಡು ಎಂದು ಒಂದು ಕವರ್‌ನ್ನು ಕೊಡಲು ಬಂದರು. ಆಗ ಎದುರುದಾರರು ದೂರುದಾರರಿಗೆ ನೀವೇ ಕೊಡಿ ಎಂದು ತಿಳಿಸಿರುವುದಾಗಿ ತಿಳಿಸಿದ್ದು, ಆಗ ದೂರುದಾರರು ಮತ್ತು ತನಿಖಾಧಿಕಾರಿಯವರು ವಿನಾ:ಕಾರಣ ಆರೋಪ ಹೊರಿಸಿ

ದಾಖಲೆ ಮತ್ತು ಪತ್ರಗಳನ್ನು ಸೃಷ್ಟಿಸಿರುತ್ತಾರೆಂದು ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ. ಆದರೆ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ತನಿಖಾಧಿಕಾರಿಯವರು ಎದುರುದಾರರಿಂದ ಸಂಗ್ರಹಿಸಿದ ಮುದ್ದೇಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಎದುರುದಾರರು ನೀಡಿರುವ ಕಾರಣಗಳು ಈ ಪ್ರಕರಣದಿಂದ ಎದುರುದಾರರನ್ನು ಕೈಬಿಡುವ ಬಗ್ಗೆ ಸಮಂಜಸವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಮತ್ತು ಆಕ್ಷೇಪಣೆಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ –(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/11/21

(ನ್ಯಾಯಮೂರ್ತಿ ಬಿ.ಎಸ್ ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.